# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.1264/2014

| | | | |
|---|---|---|---|
| ಚಾಸಾ | **8** | ಪ್ರಾಸಾ | **1** |
| ಹೆಸರು | | ಎಸ್ ಹೇಮಂತ್ ಕುಮಾರ್ | |
| ತಂದೆಯ ಹೆಸರು | | ಕೆ ಶಿವಕುಮಾರ್ | |
| ವಯಸ್ಸು | | **42**ವರ್ಷಗಳು | |
| ಉದ್ಯೋಗ | | ಪೊಲೀಸ್ ಇನ್ಸ್ಪೇಕ್ಟರ್**,** ಬೇಸ್ಕಾಂ ಜಾಗೃತ ದಳ ರಾಮನಗರ | |
| ವಿಳಾಸ | | ಬೆಂಗಳೂರು | |

ದಿನಾಂಕ**.27.10.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು**.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ಜೂನ್ **2014** ರಿಂದ ಜುಲೈ **2015** ರವರೆಗೂ ನಾನು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ**.**

ದಿಃ**16.07.2014** ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ**-7** ರವರಿಂದ ಪಡೆದುಕೊಂಡು ಪರಿಶೀಲಿಸಿ ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ**.**

ಆದೇ ದಿನ ಹಾರೋಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-**1** ಮತ್ತು ಚಾಸಾ-**2** ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರಗಳನ್ನು ಚಾಸಾ-**6** ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ.

ಆದೇ ದಿನ ಚಾಸಾ-**2** ಮತ್ತು ಚಾಸಾ-**3** ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ.**07.09.2014**ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಆಪರಾದ ಸಾಬೀತಾದ ಕಾರಣಕ್ಕೆ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಕಡತದಲ್ಲಿರುವ ಚಾಸಾ-**1** ಮತ್ತು **2** ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರಗಳನ್ನು ಕ್ರಮವಾಗಿ ನಿಪಿ-**1** ಮತ್ತು ನಿಪಿ-**2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-**1(**ಎ**)** ಮತ್ತು ನಿಪಿ-**2(**ಎ**)** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- **1**ನೇ ಆರೋಪಿ ಪರ ವಕೀಲರಾದ ಶ್ರೀ ಬಿಎಸ್‌ಎನ್ ರವರಿಂದಃ-

ತನಿಖಾ ಕಾಲದಲ್ಲಿ ಸರ್ವೆ ನಂ.**267** ಮತ್ತು **268**ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ಪಡೆದುಕೊಂಡಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.**268**ಕ್ಕೆ

ಸಂಬಂಧಿಸಿದಂತೆ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆಯ ಪ್ರಕಾರ ಸರ್ವೆ ನಂ.268ರ ಜಮೀನು ಯಾರ ಹೆಸರಿಗೆ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 1ನೇ ಆರೋಪಿಯ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.268ರ ಜಮೀನನ್ನು 2008ರಲ್ಲಿ ಖರೀದಿ ಮಾಡಿ ಅಂದಿನಿಂದಲ್ಲೂ 1ನೇ ಆರೋಪಿಯೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ಚಾಸಾ-1 ಹಾಗೂ ಚಾಸಾ-2 ರವರ ವಿರುದ್ದ ಇದೇ ನ್ಯಾಯಾಲಯದಲ್ಲಿ ಹಲವಾರು ಕ್ರಿಮಿನಲ್ ಪ್ರಕರಣಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ಚಾಸಾ-1 ಮತ್ತು ಚಾಸಾ-2 ರವರು ಅವರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-1 ಮತ್ತು ಚಾಸಾ-2 ರವರಿಗೆ ಯಾವುದೇ ಏಟು ಆಗದೆ ಇದ್ದರು ಅವರಿಗೆ ಸಹಾಯ ಮಾಡಲು ಚಾಸಾ-6 ರವರೊಂದಿಗೆ ಶ್ಯಾಮಿಲಾಗಿ ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ಈ ಪ್ರಕರಣಕ್ಕಾಗಿಯೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ-2 ರಿಂದ ಚಾಸಾ-5 ರವರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿಲ್ಲ ಎಂಬ ಸಂಗತಿಯು ಸಾಬೀತಾಗಿದ್ದರೂ ಸಹ ಚಾಸಾ-1 ಮತ್ತು ಚಾಸಾ-2 ರವರಿಗೆ ಸಹಾಯ ಮಾಡಲು ಅವರ ವಿರುದ್ದ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**2**ನೇ ಆರೋಪಿ ಪರ ವಕೀಲರು **1**ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ.

<u>ಮರುವಿಚಾರಣೆಃ- ಇಲ್ಲ</u>

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**